ದೇಗುಲದ ಬಗ್ಗೆ. ದೇಗುಲ ಎನ್ನುವ ಸಂಕೇತದ ಬಗ್ಗೆ, ಸಾಮುದಾಯಿಕವೂ, ಸನಾತನವೂ ಆಗಿರುವ ಪರಿಲಕಲ್ಪನೆಯ ಬಗ್ಗೆ. ಈ ಚಿಂತನೆಯಲ್ಲಿ ದೇಗುಲ ಮುಖ್ಯವೇ ಹೊರತು ದೇವರಲ್ಲ ಎಂದರೆ ಇದು ಚಮತ್ಕಾರದ ಮಾತಲ್ಲ. ಇದರಲ್ಲಿಯೇ ಪು.ತಿ.ನ. ಅವರ ಸ್ವಂತಿಕೆ ಇದೆ. ಒಂದು ಸಮುದಾಯ, ಒಂದು ನಾಗರಿಕತೆ, ವಿಸ್ತರಿಸಿ ಹೇಳುವುದಾದರೆ ಮನುಷ್ಯ ಕುಲ ಯಾಕೆ ದೇಗುಲವನ್ನು ಕಲ್ಪಿಸಿಕೊಳ್ಳುತ್ತದೆ ಎನ್ನುವುದೇ ಅವರಿಗೆ ವಿಸ್ಮಯ ಹಾಗೂ ಆವಿಷ್ಕಾರದ ವಿಷಯವಾಗಿದೆ. ದೇವರು ಇಲ್ಲದಿದ್ದರೂ ಮನುಷ್ಯ ದೇವರನ್ನು ಸೃಷ್ಟಿಸಿಕೊಳ್ಳುತ್ತಿದ್ದ ಎನ್ನುವ ಮಾತಿನ ಹಾಗೆ - ಕಲ್ಲು, ಮಣ್ಣು, ಕಟ್ಟಿಗೆ ಇವುಗಳಿಂದಲೇ ಪವಿತ್ರವಾದುದನ್ನು ಸೃಷ್ಟಿಸಿಕೊಳ್ಳುವುದು ಕವಿಗೆ ನಿರಂತರ ಪವಾಡವಾಗಿದೆ. ಈ ಪ್ರಕ್ರಿಯೆ, ಅದರ ಹಿಂದೆ ಇರುವ ಪವಿತ್ರೀಕರಣದ ಹಂಬಲ ಇವೆರಡೂ ಅವರಿಗೆ ಆಸ್ಥೆಯ ವಿಷಯಗಳಾಗಿವೆ. ಕವಿ ಆಧುನಿಕರೂ ಹಾಗೂ ತಾತ್ವಿಕ ಸಂದೇಹಿಗಳೂ ಆಗಿರುವುದರಿಂದ ಸ್ವಲ್ಪ ದೂರನಿಂತು ಈ ಪ್ರಕ್ರಿಯೆಯನ್ನು ವ್ಯಾಖ್ಯಾನಿಸಬಲ್ಲರು. ಆದರೆ ಆತ್ಮ ಹಾಗೂ ಋತದ ಹಾಗೆ ದೇಗುಲವೂ ಶಾಶ್ವತವೆನ್ನುವ ನಂಬಿಕೆ ಅವರಿಗಿದೆ. ಅಥವಾ ಸದ್ಯ ಮತ್ತು ನಿತ್ಯವೆನ್ನುವ categoryಗಳನ್ನೇ ಮೀರಿದ ಅಸ್ತಿತ್ವ ಅದಕ್ಕಿದೆ ಎಂದು ಅವರು ನಂಬುತ್ತಾರೆ. ಈ ನಂಬುಗೆಯೇ ಮನುಷ್ಯ ಕುಲಕ್ಕೆ ಸಾಮುದಾಯಿಕತೆಯನ್ನು, ಇಹದ, ಸಂಸಾರದ ಕಲ್ಮಶಗಳನ್ನು ಮೀರುವ ಮುಹೂರ್ತಗಳನ್ನು ಅಹಂಕಾರವನ್ನು ಮೀರುವ ಮಾರ್ಗವನ್ನು ತಂದುಕೊಡುತ್ತದೆ. ಹಾಗೆಂದ ಮಾತ್ರಕ್ಕೆ ಇಲ್ಲಿ 'ಸಂಸಾರ ಹೇಯಸ್ಥಿತಿ' ಎನ್ನುವ ಧೋರಣೆ ಇಲ್ಲ, ಈ ದೇವಾಲಯಕ್ಕೆ ಬರುವ 'ಜಾರುಗೆನ್ನೆಯ' ಹೆಂಗಸರು ಸಂಸಾರದಲ್ಲಿ ಮುಳುಗಿದವರೇ. ಆದರೆ ದೇಗುಲಕ್ಕೆ ಬರುವ ಸಡಗರ, ಸಂತಸ, ಅವರ ಚೆಲುವು ಇವೆಲ್ಲವೂ ಅಲ್ಲಿ ವಿಶೇಷವಾದ ಪ್ರಭೆಯನ್ನು ಪಡೆಯುತ್ತವೆ.

ಗಮನಿಸಬೇಕಾದ ಅಂಶವೆಂದರೆ ಸಾಂಪ್ರದಾಯಿಕವಾದ ಪರಿಕಲ್ಪನೆಗಳ ಮೂಲಕವೇ ಈ ಕಾವ್ಯದೊಳಗಣ ತಾತ್ವಿಕತೆಯು ಅಸಾಂಪ್ರದಾಯಿಕವಾಗಿದೆ. ಮೊದಲನೆಯದಾಗಿ ಇದು ದೇವರನ್ನೂ ಮನುಷ್ಯನ ಮನಸ್ಸಿನ ಸೃಷ್ಟಿಯೆಂದು ಒಪ್ಪಬಲ್ಲದು. ಎರಡನೆಯದಾಗಿ ಅದು ವಾಸ್ತವ ಜಗತ್ತನ್ನೂ ಮನಸ್ಸಿನ ಸೃಷ್ಟ ಎಂದು ನೋಡಬಲ್ಲದು. ಇಂಥ radical ಸ್ವರೂಪದ ಭಾವನಾವಾದವು (idealist philosophy) ಭಾರತೀಯ ತತ್ವ ಪರಂಪರೆಗೆ ಹೊಸದಲ್ಲ. ಪಶ್ಚಿಮದ phenomenology ಕೂಡ ಇಂಥ ಮೂಲ ಪ್ರಮೇಯಗಳನ್ನು ಬಳಸಿಕೊಳ್ಳುತ್ತದೆ. ಅದರ ಚರ್ಚೆ ಇಲ್ಲಿ ಅನವಶ್ಯಕ. ಪು.ತಿ.ನ. ಅವರು ಈ ತಾತ್ವಿಕ ಸಂಪ್ರದಾಯಗಳನ್ನು ಮಲೆದೇಗುಲದ ಪರಿಕಲ್ಪನೆಗೆ ಹೊಂದಿಸಿಕೊಂಡಿದ್ದಾರೆ. ವಿಶಿಷ್ಟವೆಂದರೆ, ಈ ತಾತ್ವಿಕ ಸಂಪ್ರದಾಯಗಳು ಮಾಡುವ ವಸ್ತು ಪ್ರಪಂಚದ, ಸಂಸಾರದ ನಿರಾಕರಣೆ ಅಥವಾ ತಿರಸ್ಕರಣೆ ಇಲ್ಲಿ ಇಲ್ಲ. ಕೊನೆಯ ಮುಕ್ತಕಗಳಲ್ಲಿ ಸ್ವಲ್ಪ ವಾಚ್ಯವಾಗಿಯೇ ಹೇಳುವಂತೆ ಎಲ್ಲದರಲ್ಲೂ 'ಶಿವ' (ಒಳಿತು, ದಿವ್ಯ) ಇರುವುದರಿಂದ ನಿರಾಕರಣೆಗೆ ಆಧಾರವೇ ಇಲ್ಲ. ಹೀಗಾಗಿ ಮೊದಲ ಮುಕ್ತಕಗಳು ಮಲೆದೇಗುಲವನ್ನು ಸಂದೇಹಗಳು 'ಐತಂದು' ಕೂಡುವ ತಾಣವಾಗಿ ನೋಡಿದರೂ ಈ ಸಂದೇಹಗಳು ನಿರಾಕರಣೆಗೆ ಸಾಧನಗಳಾಗುವುದಿಲ್ಲ. ಬುದ್ಧಿ ಮತ್ತು ಅಹಂಕಾರದಿಂದಾಗಿ ಹುಟ್ಟಿಕೊಳ್ಳುವ ಸಂದೇಹಗಳು ನಂಬಿಕೆ ಮತ್ತು ಸಾಮುದಾಯಿಕ ಆಚರಣೆಗಳಲ್ಲಿ 'ಶಮ'ವನ್ನು (ನಿವಾರಣೆ, ಪರಿಹಾರ) ಪಡೆಯುತ್ತವೆ. ಸರಿಯಾಗಿ ಹೇಳುವುದಾದರೆ ಈ ಸಂದೇಹಗಳ ಹಿಂದೆ ಇರುವುದು ತಾತ್ವಿಕವಾಗಿ binaries ಎಂದು ಕರೆಯುವ ವೈರುಧ್ಯಗಳು. ಜೀವ, ಮನಸ್ಸು, ಆತ್ಮ, ಒಳಗು, ಹೊರಗು, ಬುದ್ಧಿ, ಭಾವ ಹೀಗೆ ಈ ವೈರುಧ್ಯಗಳಿವೆ. ಕವಿ ಬಯಸುವುದು ಈ ವೈರುಧ್ಯಗಳನ್ನು ಮೀರಿಹೋಗುವ 'ತುಂಬುತನ', ಪರಿಪೂರ್ಣತೆ. ಆದರೆ ತುಂಬುತನದ ಕಲ್ಪನೆಯೇ ಆದರ್ಶಪರ ಅಥವಾ utopian ಆಗಿದೆ. ಅದು ಮನುಷ್ಯರಿಗೆ ದಕ್ಕಬಲ್ಲದು ಎಂದು ಧೈರ್ಯದಿಂದ ಹೇಳಲಾಗುವುದಿಲ್ಲ. ಏಕೆಂದರೆ ಮನುಷ್ಯರ ವಿಧಿ ಸದಾ ಸಂದೇಹಗಳ ಜೊತೆಗೆ ಬದುಕುವುದೇ ಆಗಿರಬಹುದೆ? ಗೊತ್ತಿಲ್ಲ, ಆದರೆ ಮಲೆದೇಗುಲದ ಅನುಭವವು ತುಂಬುತನದ ಆ ಕ್ಷಣದ, ಆ ಮುಹೂರ್ತದ ಅನುಭವವನ್ನು ಕೊಡಬಹುದು. ಇದು ಮಲೆದೇಗುಲದ ಅಸ್ತಿತ್ವದ ಸಾರ್ಥಕತೆ ಆಗಿದೆ. ಅವಶ್ಯಕತೆಯೂ ಆಗಿದೆ.

ತೇಜಶ್ರೀ ಅವರ ಗಂಭೀರವಾದ ವ್ಯಾಖ್ಯಾನಗಳನ್ನು ಜೋಡಿಸಿಕೊಂಡು ಓದಿದರೆ ಪು.ತಿ.ನ. ಅವರ 'ಮಲೆದೇಗುಲ' ಕಾವ್ಯದ ವಸ್ತು ತುಂಬಾ